# A

**16118** **120 MINUTES**

1. ಇವರುಗಳಲ್ಲಿ ಚಂಪೂ ಪ್ರಕಾರಕ್ಕೆ ಸೇರದ ಕವಿಗಳು ಯಾರು?

a) ನಾಗಚಂದ್ರ b) ನೇಮಿಚಂದ್ರ

c) ಚಾಮರಸ d) ಕುಮಾರ ವಾಲ್ಮೀಕಿ

ಇವುಗಳಲ್ಲಿ ಸರಿಯಾದ ಉತ್ತರ :

A) a ಮತ್ತು d B) b ಮತ್ತು c

C) c ಮತ್ತು d D) a ಮತ್ತು b

2. 'ಕರ್ಣಂಗಂಡಲ್ತೆ ಕಲ್ತರ್ ನುಡಿವ ಪಸುಗೆಯಂ ಗಂಡರಾ ಗಂಡವಾತುಂ' ಈ ಪದ್ಯ ಯಾವ ವೃತ್ತದಲ್ಲಿದೆ?

A) ಮತ್ತೇಭವಿಕ್ರೀಡಿತ B) ಸ್ರಗ್ಧರಾವೃತ್ತ

C) ಮಹಾಸ್ರಗ್ಧರಾವೃತ್ತ D) ಶಾರ್ದೂಲವಿಕ್ರೀಡಿತ

3. "ಭೋಗವಿಜಯ, ದಿಗ್ವಿಜಯ, ಯೋಗವಿಜಯ, ಅರ್ಕಕೀರ್ತಿವಿಜಯ, ಮೋಕ್ಷವಿಜಯ" ಈ ಐದು ಭಾಗಗಳನ್ನು ಒಳಗೊಂಡಿರುವ ಒಂದು ಶ್ರೇಷ್ಠ ದಾರ್ಶನಿಕ ಕಾವ್ಯ ಯಾವುದು?

A) ಭರತೇಶವೈಭವ B) ಅನಂತನಾಥಪುರಾಣ

C) ಆದಿಪುರಾಣ D) ಅಜಿತನಾಥಪುರಾಣ

4. ೧೯೦೭ರಲ್ಲಿ ನಂಜನಗೂಡಿನ ತಿರುಮಲಾಂಬ ಅವರು ಪ್ರಾರಂಭಿಸಿದ ಪತ್ರಿಕೆ ಇದು.

A) ಕರ್ನಾಟಕ ನಂದಿನಿ B) ಕರ್ನಾಟಕದ ಜನಜೀವನ

C) ಕರ್ನಾಟಕ ಕೇಸರಿ D) ಮಹಾಕರ್ನಾಟಕ

5. 'ಕಲ್ಲುಕರಗುವ ಸಮಯ' ಇದು ಯಾರ ಕೃತಿ

A) ಶಾಂತಿನಾಥ ದೇಸಾಯಿ B) ಯಶವಂತ ಚಿತ್ತಾಲ

C) ಶ್ರೀಕೃಷ್ಣ ಆಲನಹಳ್ಳಿ D) ಪಿ.ಲಂಕೇಶ್

6. "ಬೀಸಿದನು ನಿಜ ಮಾಯೆಯನು ಡೊಳ್ಳಾಸದಲಿ ಹರಹಿದನು ತನುವನು ರೋಷವನು ಬಿತ್ತಿದನು ಮನದಲಿ ನರನ ಕಲಿಮಾಡಿ..." ಈ ಉಕ್ತಿಗಳು ಬರುವ ಕಾವ್ಯ

A) ಕುಮಾರವ್ಯಾಸ ಭಾರತ B) ಕೃಷ್ಣರಾಜ ಭಾರತ

C) ಸಾಳ್ವ ಭಾರತ D) ತುರಂಗ ಭಾರತ

7. 'ಗಿರಿಜಾ ಕಂಡ ಸಿನಿಮಾ' ಈ ಕಥೆಯ ಕರ್ತೃ

A) ನಿರಂಜನ B) ಚದುರಂಗ

C) ಬಸವರಾಜಕಟ್ಟೀಮನಿ D) ತರಾಸು

8. ಕನ್ನಡದ ಮೊದಲ ದುರಂತ ನಾಟಕ ಎಂಬ ಹೆಗ್ಗಳಿಕೆ ಈ ಕೃತಿಗೆ ಸಲ್ಲುತ್ತದೆ.

A) ರಕ್ತಾಕ್ಷಿ B) ಅಶ್ವತ್ಥಾಮನ್

C) ಅಂತಿಗೊನೆ D) ಗದಾಯುದ್ಧ

9. ಭಾರತದಲ್ಲಿ ಮೊದಲು ಪತ್ರಿಕೆ ಹೊರಡಿಸಿದವರು ಯಾರು?

A) ಜೇಮ್ಸ್ ಆಗಸ್ಟಸ್ ಹಿಕ್ಕಿ B) ವಾರನ್ ಹೇಸ್ಟಿಂಗ್ಸ್

C) ಕರ್ನಲ್ ಮೆಕೆಂಜಿ D) ವಿಲಿಯಂ ಬೋಲ್ಟ್ಸ್

10. ಇಬ್ಸನನ 'ದಿ ಡಾಲ್ಸ್ ಹೌಸ್' ನಾಟಕವನ್ನು ಕನ್ನಡಕ್ಕೆ 'ಸೂತ್ರದ ಬೊಂಬೆ' ಎಂದು ಅನುವಾದಿಸಿದವರು ಯಾರು?

A) ಬಿ.ಪುಟ್ಟಸ್ವಾಮಯ್ಯ B) ಬೆಳ್ಳಾವೆ ನರಹರಿಶಾಸ್ತ್ರಿ

C) ಎಂ.ಎಲ್ ಶ್ರೀಕಂಠೇಶಗೌಡ D) ಎಸ್.ಜಿ.ಶಾಸ್ತ್ರಿ

11. 'ತುಳು ಒಗಟುಗಳು' ಪುಸ್ತಕದ ಲೇಖಕರು

A) ಅರವಿಂದ ಮಾಲಗತ್ತಿ B) ಬಿ.ಎ.ವಿವೇಕರೈ

C) ಪುರುಷೋತ್ತಮ ಬಿಳಿಮಲೆ D) ಕೆ.ಚಿನ್ನಪ್ಪಗೌಡ

12. 'ಪ್ರಪಂಚ' ಎಂಬ ವಾರ ಪತ್ರಿಕೆಯನ್ನು ಸ್ಥಾಪಿಸಿದವರು ಯಾರು?

A) ಕೆ.ಎಚ್.ಪಾಟೀಲ B) ಖಾದ್ರಿಶಾಮಣ್ಣ

C) ಪಿ.ಆರ್.ರಾಮಯ್ಯ D) ಪಾಟೀಲಪುಟ್ಟಪ್ಪ

13. ಕೈಲಾಸಂ ಅವರ 'ಏಕಲವ್ಯ'ಶ್ರೀನಿವಾಸರ 'ಕಾಕನಕೋಟೆ' ಪರ್ವತವಾಣಿಯವರ 'ಕವಿಭಿಕ್ಷೆ' ಇವು

A) ಐತಿಹಾಸಿಕ ನಾಟಕಗಳು B) ಸಾಮಾಜಿಕ ನಾಟಕಗಳು

C) ಪೌರಾಣಿಕ ನಾಟಕಗಳು D) ದುರಂತ ನಾಟಕಗಳು

14. ಭಾರತದ ಪತ್ರಿಕೋದ್ಯಮದ ಪಿತಾಮಹ ಎಂಬ ಹೆಗ್ಗಳಿಕೆ ಇವರಿಗೆ ಸಲ್ಲುತ್ತದೆ?

A) ಲಾಲ ಲಜಪತರಾಯ್ B) ಬಾಲಗಂಗಾಧರ ತಿಲಕ್

C) ರಾಜರಾಮ ಮೋಹನರಾಯ್ D) ಮಹಾತ್ಮಗಾಂಧೀಜಿ

15. ‘ಉಮರನ ಒಸುಗೆ’ಈ ಕೃತಿಯ ಕರ್ತೃ

A) ಪು.ತಿ.ನ   B) ಡಿ.ವಿ.ಜಿ
C) ತೀ.ನಂ.ಶ್ರೀ   D) ಕಾವ್ಯಾನಂದ

16. ಪರಾವಸುವಿನ ಹೆಂಡತಿ

A) ವಿಶಾಖಾ   B) ನಿತ್ತಿಲೆ   C) ಇಸ್ಮೇನೆ   D) ಯೊಕಾಸ್ತ

17. ‘ಯುಗಧರ್ಮ ಹಾಗೂ ಸಾಹಿತ್ಯದರ್ಶನ’ ಈ ಕೃತಿಯ ಕರ್ತೃ

A) ಗಿರಡ್ಡಿ ಗೋವಿಂದರಾಜ   B) ಜಿ.ಎಸ್.ಆಮೂರ
C) ಎಲ್.ಎಸ್.ಶೇಷಗಿರಿರಾವ್   D) ಕೀರ್ತಿನಾಥ ಕುರ್ತಕೋಟಿ

18. ‘ವಾಕ್ಯಂ ರಸಾತ್ಮಕಂ ಕಾವ್ಯಂ’ ಹೀಗೆಂದು ಹೇಳಿರುವ ಆಲಂಕಾರಿಕ

A) ಭಾಮಹ   B) ಹೇಮಚಂದ್ರ
C) ವಿಶ್ವನಾಥ   D) ಕ್ಷೇಮೇಂದ್ರ

19. ಇವುಗಳಲ್ಲಿ ಸರಿಯಾದುದನ್ನು ಗುರುತಿಸಿ.

A) ಸೈದ್ಧಾಂತಿಕ ಜಾನಪದ–ಎಚ್.ಜೆ.ಲಕ್ಕಪ್ಪಗೌಡ
B) ಆನ್ವಯಿಕ ಜಾನಪದ–ಅಂಬಳಿಕೆ ಹಿರಿಯಣ್ಣ
C) ಜಾನಪದ ಅಧ್ಯಯನದ ಸಾಂಸ್ಕೃತಿಕ ಇತಿಹಾಸ–ಎನ್.ತಪಸ್ವೀಕುಮಾರ್
D) ದ್ರಾವಿಡ ಜಾನಪದ– ದೇ.ಜವರೇಗೌಡ

20. ‘ರಸಗಂಗಾಧರ’ ಕೃತಿಯ ಕರ್ತೃ

A) ಕವಿಕಾಮ   B) ಜಗನ್ನಾಥ
C) ಶ್ರೀವಿಜಯ   D) ೨ನೇನಾಗವರ್ಮ

21. ‘ಬಲ್ಲಿದರು ಮಾಡಿದರೆ ವ್ಯವಹಾರ
ಬಡವರು ಮಾಡಿದರೆ...............................’ ಈ ಗಾದೆಗೆ ಯಾವ ಪದ ಸೇರಿದರೆ ಪೂರ್ಣವಾಗುತ್ತದೆ.

A) ವ್ಯಾಪಾರ   B) ವ್ಯಭಿಚಾರ
C) ದುರಾಚಾರ   D) ಸದಾಚಾರ

22. “ಆನ್ ದಿ ಸಬ್ಲೈಮ್”ನ ಪ್ರತಿಪಾದಕ

A) ಟಿ.ಎಸ್.ಎಲಿಯಟ್   B) ಲಾಂಗೈನಸ್
C) ಅರಿಸ್ಟಾಟಲ್   D) ಹೊರೇಸ್

23. 'ಹಳ್ಳಿಯ ಹಾಡು' ಕೃತಿಯ ಕರ್ತೃ

A) ಗೊರೂರು ರಾಮಸ್ವಾಮಿ ಅಯ್ಯಂಗಾರ್

B) ಮತಿಘಟ್ಟ ಕೃಷ್ಣಮೂರ್ತಿ

C) ಅರ್ಚಕ ಬಿ.ರಂಗಸ್ವಾಮಿ

D) ಕ.ರಾ.ಕೃಷ್ಣಸ್ವಾಮಿ

24. ಅದ್ಭುತರಸದ ಸ್ಥಾಯಿಭಾವ

A) ಕ್ರೋಧ B) ಜಿಗುಪ್ಸೆ C) ವಿಸ್ಮಯ D) ಭಯ

25. ಕಾವ್ಯವು ಯಾವ ವರ್ಗಕ್ಕೆ ಸೇರುತ್ತದೆ?

A) ಪ್ರಭುಸಮ್ಮಿತ B) ಮಿತ್ರಸಮ್ಮಿತ

C) ಕಾಂತಾಸಮ್ಮಿತ D) ಯಾವುದು ಅಲ್ಲ

26. 'ಕಾವ್ಯಾಲಂಕಾರಸಾರಸಂಗ್ರಹ' ಇದು ಯಾರ ಕೃತಿ?

A) ಉದ್ಭಟ B) ಮಮ್ಮಟ C) ಭಟ್ಟಲೊಲ್ಲಟ D) ರುದ್ರಟ

27. ಇವುಗಳಲ್ಲಿ ಸರಿಯಾದುದನ್ನು ಗುರುತಿಸಿ.

A) ಕಾವ್ಯಪ್ರಕಾಶ–ಹೇಮಚಂದ್ರ

B) ಕಾವ್ಯಮೀಮಾಂಸೆ–ಮಹಿಮಭಟ್ಟ

C) ಅಪ್ರತಿಮ ವೀರಚರಿತೆ–ಸಿಂಗರಾರ್ಯ

D) ವಕ್ರೋಕ್ತಿಜೀವಿತ–ಕುಂತಕ

28. ನಿನ್ನ ಕತ್ತಿಗೆ ನನ್ನ ಕಾಲು
ನಿನ್ನ ಬಾಯಿಗೆ ನನ್ನ ಕೋಲು– ಈ ಒಗಟಿನ ಅರ್ಥವೇನು?

A) ಹಿಟ್ಟಿನ ಮಡಕೆ B) ಹೂವಿನ ಬುಟ್ಟಿ

C) ಒಲೆ ಊದುವ ಕೊಳವೆ D) ಕೊಳಲು ನುಡಿಸುವುದು

29. 'ಕಿಟ್ಟೆಲ್ ಕೋಶದ ಗಾದೆಗಳು' ಕೃತಿಯ ಲೇಖಕರು

A) ಸುಧಾಕರ B) ಪಿ.ಕೆ.ರಾಜಶೇಖರ

C) ಸಿಂಪಿಲಿಂಗಣ್ಣ D) ರಾಗೌ

30. "ಕಾವ್ಯ ಶೋಭಾಕರಾನ್ ಧರ್ಮಾನ್ ಅಲಂಕಾರನ್ ಪ್ರಚಕ್ಷತೇ......" ಎಂದು ಹೇಳಿರುವ ಮೀಮಾಂಸಕಾರ

A) ದಂಡಿ B) ವಾಮನ C) ರುದ್ರಭಟ್ಟ D) ಭಾಮಹ

31. 'ಜೀವಂಧರ ಚರಿತೆ'ಯ ಕರ್ತೃ

A) ಲಕ್ಕಣ್ಣ ದಂಡೇಶ  B) ವಿಜಯಣ್ಣ

C) ಭಾಸ್ಕರ  D) ಶಿಶುಮಾಯಣ

32. 'ಫೋಕ್‌ಲೋರ್ ಅಂಡ್ ಫೋಕ್‌ಲೈಫ್' ಇದು ಯಾರ ಕೃತಿ.?

A) ಅಲೆಕ್ಸಾಂಡರ್ ಎಚ್.ಕ್ರಾಪ್ಪೆ  B) ಜಾರ್ಜ್ ಲಾರೆನ್ಸ್‌ಗೊಮ್ಮೆ

C) ಸ್ಟಿತ್ ಥಾಂಸನ್  D) ರಿಚರ್ಡ್ ಎಂ.ಡಾರ್ಸನ್

33. ಇವುಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುವುದಿಲ್ಲ?

A) ಕಾವ್ಯಾರ್ಥ ಚಿಂತನ– ಜಿ.ಎಸ್.ಶಿವರುದ್ರಪ್ಪ

B) ತೌಲನಿಕ ಕಾವ್ಯಮೀಮಾಂಸೆ– ತೀ.ನಂ.ಶ್ರೀ

C) ಪಾಶ್ಚಾತ್ಯ ಕಾವ್ಯಮೀಮಾಂಸೆ–ವಿ.ಎಂ.ಇನಾಂದಾರ್

D) ಭಾರತೀಯ ಕಾವ್ಯ ಮೀಮಾಂಸೆಗೆ ಕನ್ನಡ ಕವಿಗಳ ಕೊಡುಗೆ– ಎಂ.ವಿ.ಸೀತಾರಾಮಯ್ಯ

34. ಇವುಗಳಲ್ಲಿ ದೇವುಡು ನರಸಿಂಹಶಾಸ್ತ್ರಿ ಅವರ ಯಾವ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

A) ಮಹಾಕ್ಷತ್ರಿಯ  B) ಮಹಾಬ್ರಾಹ್ಮಣ

C) ಮಹಾದರ್ಶನ  D) ಮಹಾ ಯಾತ್ರಿಕ

35. 'ದೊರೆ ಈಡಿಪಸ್' ಮತ್ತು 'ಅಂತಿಗೊನೆ' ನಾಟಕದ ಅನುವಾದಕರು

A) ಪ್ರಧಾನ ಗುರುದತ್ತ

B) ಎನ್.ಎಸ್.ಲಕ್ಷ್ಮೀನಾರಾಯಣಭಟ್ಟ

C) ಎ.ಎನ್.ಮೂರ್ತಿರಾವ್

D) ಪಿ.ಲಂಕೇಶ್

36. "ಪ್ರಜ್ಞಾನವನವೋಲ್ಲೇಖಶಾಲಿನೀ ಪ್ರತಿಭಾ......" ಎಂದು ಹೇಳಿರುವ ಆಲಂಕಾರಿಕ

A) ಭಟ್ಟತೌತ  B) ಭಟ್ಟನಾಯಕ

C) ರುದ್ರಭಟ್ಟ  D) ರಾಜಶೇಖರ

37. 'ಧ್ವನ್ಯಾಲೋಕ ಲೋಚನ' ಇದು ಯಾರ ಕೃತಿ?

A) ಆನಂದವರ್ಧನ  B) ಅಭಿನವಗುಪ್ತ

C) ಅಪ್ಪಯ್ಯದೀಕ್ಷಿತ  D) ಅಜಿತಸೇನ

38. 'ವಿದ್ವಟ್ಸ್ತ್ರೀಯರ್' ಇದು ಕೇಶಿರಾಜನ ಪ್ರಕಾರ ಯಾವ ಸಂಧಿ?

A) ಅನಿಯೋಗ ಸಂಧಿ B) ಅನುಕರಣ ಸಂಧಿ

C) ವಾಕ್ಯವೇಷ್ಟನ ಸಂಧಿ D) ಶ್ರುತಿಕಷ್ಟ ಸಂಧಿ

39. 'ತಿಪ್ಪ, ಮಾಚ, ಮಾರ, ಕೇತ' ಇವು

A) ರೂಢನಾಮ B) ಅನ್ವರ್ಥನಾಮ

C) ಅಂಕಿತನಾಮ D) ದಿಟದನಾಮ

40. ಉತ್ತರಪದ ಪ್ರಧಾನವಾದ ಸಮಾಸ ಯಾವುದು?

A) ಬಹುವ್ರೀಹಿಸಮಾಸ B) ತತ್ಪುರುಷ ಸಮಾಸ

C) ಗಮಕಸಮಾಸ D) ಕ್ರಿಯಾಸಮಾಸ

41. 'ಉಡುಗೊರೆ' ಇದು ಯಾವ ಭಾಷೆಯ ಪದ?

A) ಸಂಸ್ಕೃತ B) ಹಿಂದೂಸ್ತಾನಿ

C) ಕನ್ನಡ D) ಪರ್ಷಿಯನ್

42. 'ಮಗು', 'ಗಿಳಿ' ಇವು

A) ಪುಲ್ಲಿಂಗ B) ಸ್ತ್ರೀಲಿಂಗ

C) ಪುಂನಪುಂಸಕ ಲಿಂಗ D) ನಪುಂಸಕ ಲಿಂಗ

43. "ಸಂದ ಪಕಾರಕ್ಕೆ ಹಕಾರಂ ದೊರೆಕೊಳ್ಗುಂ ವಿಕಲ್ಪದಿಂ....." ಈ ಹೇಳಿಕೆ ಬರುವ ಕೃತಿ.

A) ಶಬ್ದಮಣಿದರ್ಪಣ B) ಕಾವ್ಯಾವಲೋಕನ

C) ಕವಿರಾಜಮಾರ್ಗ D) ಶಬ್ದಾನುಶಾಸನ

44. 'ಕರ್ನಾಟಕ ಭಾಷಾಭೂಷಣ' ಯಾವ ಭಾಷೆಯಲ್ಲಿ ರಚಿತವಾಗಿರುವ ಹಳಗನ್ನಡ ವ್ಯಾಕರಣ ಗ್ರಂಥ

A) ಕನ್ನಡ B) ಪ್ರಾಕೃತ C) ಸಂಸ್ಕೃತ D) ಪಾಳಿ

45. 'ಬೆಟ್ಟದಾವರೆ' ಇದು ಯಾವ ಸಂಧಿಗೆ ಉದಾಹರಣೆ

A) ಲೋಪಸಂಧಿ B) ಆಗಮ ಸಂಧಿ

C) ಸವರ್ಣದೀರ್ಘಸಂಧಿ D) ಆದೇಶ ಸಂಧಿ

46. 'ಹೊಟ್ಟೆ ತಣ್ಣಗಿರಲಿ' ಇದು ಯಾವ ಪದ?

A) ಜೋಡಿಪದ B) ದ್ವಿರುಕ್ತಿ C) ನುಡಿಗಟ್ಟು D) ನಾಣ್ನುಡಿ

47. 'ಈಟ್ದಿನಗಂಟ' ಈ ಪದದ ಗ್ರಾಂಥಿಕ ರೂಪ

A) ಇಲ್ಲಿಯತನಕ B) ಇಲ್ಲಿಯವರೆಗೆ

C) ಇಷ್ಟುದಿನಗಳತನಕ D) ಈ ಹೊತ್ತಿನವರೆಗೆ

48. 'ಜುಳುಜುಳು' ಇದು

A) ದ್ವಿರುಕ್ತಿ B) ಅನುಕರಣಾವ್ಯಯ

C) ಪಡೆನುಡಿ D) ಕೃದಂತ

49. 'ಡಿಕ್ಷನರಿ ಆಫ್ ಫೋಕ್‌ಲೋರ್ ಮೈಥಾಲಜಿ ಅಂಡ್ ಲೆಜೆಂಡ್' ಕೃತಿಯ ಸಂಪಾದಕರು ಯಾರು?

A) ಮರಿಯಾ ಲೀಚ್ B) ಮ್ಯಾಕ್ಸ್‌ಮುಲ್ಲರ್

C) ವಿಲಿಯಂ ಥಾಮ್ಸ್ D) ಚಾಲ್ಸ್ ಇ ಗೋವರ್

50. ಇವು ಘೋಷ ಧ್ವನಿಮಾಗಳು

A) ಗ್, ಜ್, ಡ್ B) ಕ್, ಚ್, ಟ್

C) ಮ್, ನ್, ಣ್ D) ತ್, ಪ್, ವ್

51. 'ಭಿತ್ತಿ' ಎಂದರೆ

A) ಬೀಜ B) ಭೀತಿ C) ಗೋಡೆ D) ಪರದೆ

52. 'ಎಲಿಮೆಂಟರಿ ಗ್ರಾಮರ್ ಆಫ್ ದಿ ಲ್ಯಾಂಗ್‌ವೇಜ್' ಈ ಕೃತಿಯ ಕರ್ತೃ

A) ಥಾಮಸ್ ಹಡ್ಸನ್ B) ಜಾನ್ ಗ್ಯಾರೆಟ್

C) ಜೆ.ಎಫ್.ಕಿಟ್ಟಲ್ D) ಬಿ.ಎಲ್.ರೈಸ್

53. ದ್ರಾವಿಡ ಭಾಷೆಗಳು ಸ್ವತಂತ್ರ ಭಾಷಾ ವರ್ಗಕ್ಕೆ ಸೇರುತ್ತವೆಂದು ಮೊದಲು ಹೇಳಿದ ವಿದ್ವಾಂಸ

A) ರಾಸ್‌ಮಸ್ಕ್‌ರಾಸ್ B) ಎಂ.ಬಿ.ಎಮಿನೋ

C) ಟಿ.ಬರೋ D) ರಾಬರ್ಟ್ ಕಾಲ್ಡ್‌ವೆಲ್

54. 'ತಾವು–ತಾನು' ಇವು ಯಾವ ಬಗೆಯ ಸರ್ವನಾಮಗಳು?

A) ಆತ್ಮಾರ್ಥಕ ಸರ್ವನಾಮ B) ಪ್ರಶ್ನಾರ್ಥಕ ಸರ್ವನಾಮ

C) ಪುರುಷವಾಚಕ ಸರ್ವನಾಮ D) ನಿರ್ದೇಶಾತ್ಮಕ ಸರ್ವನಾಮ

55. 'ಗುಲ್ಬರ್ಗ ಕನ್ನಡ' ಎಂಬುದು ಒಂದು

A) ಸ್ವತಂತ್ರ ಭಾಷೆ B) ಸಾಮಾಜಿಕ ಉಪಭಾಷೆ

C) ಪ್ರಾದೇಶಿಕ ಉಪಭಾಷೆ D) ಉತ್ತರ ದ್ರಾವಿಡ ಭಾಷೆ

56. 'ದಸ್ತಾವೇಜು' ಇದು ಯಾವ ಭಾಷೆಯ ಪದ

A) ಸಂಸ್ಕೃತ B) ಮರಾಠಿ

C) ಪೋರ್ಚುಗೀಸ್ D) ಉರ್ದು

57. ಇಲ್ಲಿನ ಯಾವ ಭಾಷೆಯಲ್ಲಿ ಲಿಂಗವ್ಯವಸ್ಥೆ ಕಂಡುಬರುವುದಿಲ್ಲ?

A) ಬ್ರಾಹೂಈ B) ತಮಿಳು

C) ಪರ್ಜಿ D) ತೆಲುಗು

58. 'ಆಧುನಿಕ ಕಂಪ್ಯೂಟರ್ ಮೂಲ ಶಿಕ್ಷಣ' ಈ ಕೃತಿಯ ಕರ್ತೃ

A) ಸುಧಾಮೂರ್ತಿ B) ಚಿದಾನಂದಗೌಡ

C) ಆರ್.ಶ್ರೀಧರ D) ನಾರಾಯಣಮೂರ್ತಿ

59. ಇವರು ವ್ಯಾಕರಣ ಗ್ರಂಥಗಳನ್ನು ರಚಿಸಿರುವ ಕವಿಗಳು

a) ಕೇಶಿರಾಜ b) ತಿರುಮಲಾರ್ಯ

c) ೨ನೇ ನಾಗವರ್ಮ d) ಈಶ್ವರ

ಇವುಗಳಲ್ಲಿ ಸರಿಯಾದ ಉತ್ತರ :

A) a ಮತ್ತು d B) a ಮತ್ತು c

C) b ಮತ್ತು c D) a ಮತ್ತು b

60. 'ಅರಲು–ಬರಲು' ಈ ಕೃತಿಯ ಕರ್ತೃ

A) ವಿ.ಸೀತಾರಾಮಯ್ಯ B) ಕೆ.ಎಸ್.ನರಸಿಂಹಸ್ವಾಮಿ

C) ಸು.ರಂ.ಎಕ್ಕುಂಡಿ D) ಸುಜನಾ

61. "ಮೊದಲ ತಾಯ ಹಾಲ ಕುಡಿದು, ಲಲ್ಲೆಯಿಂದ ತೊದಲಿ ನುಡಿದು, ಕೆಳೆಯರೊಡನೆ ಬೆಳೆದು ಬಂದ ಮಾತದಾವುದು..." ಈ ಪದ್ಯ ಸಾಲುಗಳು ಬರುವ ಕೃತಿ.

A) ಪತ್ರಪುಷ್ಪ

B) ಚಿಂತಾಮಣಿಯಲ್ಲಿ ಕಂಡಮುಖ

C) ಕಲಾಸುಂದರಿ

D) ಇಂಗ್ಲಿಷ್ ಗೀತಗಳು

62. 'ಕಂನಾಡ ಸಾಹಿತಜ್ಞರ ಆತ್ಮಕಥನ' ಇದು ಯಾರ ಕೃತಿ.

A) ಶಂಬಾ.ಜೋಶಿ B) ಎಂ.ಗೋವಿಂದಪೈ

C) ಆರ್.ನರಸಿಂಹಾಚಾರ್ D) ರಂ.ಶ್ರೀ.ಮುಗಳಿ

63. ಷೇಕ್ಸ್‌ಪಿಯರನ 'ಟೆಂಪೆಸ್ಟ್' ನಾಟಕವನ್ನು ಕನ್ನಡಕ್ಕೆ 'ಬಿರುಗಾಳಿ' ಎಂದು ಅನುವಾದ ಮಾಡಿರುವವರು ಯಾರು?

A) ಎಂ.ಎಲ್.ಶ್ರೀಕಂಠೇಶಗೌಡ    B) ಕುವೆಂಪು
C) ಎಂ.ಎಸ್.ಪುಟ್ಟಣ್ಣ    D) ಕೆ.ಎಸ್.ಭಗವಾನ್

64. 'ಗೋಕುಲ ನಿರ್ಗಮನ' ನಾಟಕದ ಕರ್ತೃ

A) ಪು.ತಿ.ನ    B) ಕೀರ್ತಿನಾಥ ಕುರ್ತಕೋಟಿ
C) ಕೆ.ವಿ.ಸುಬ್ಬಣ್ಣ    D) ಶಿವರಾಮಕಾರಂತ

65. "ತೆರಣಿಯ ಹುಳು ತನ್ನ ಸ್ನೇಹದಲ್ಲಿ ಮನೆಯ ಮಾಡಿ ತನ್ನ ನೂಲು ತನ್ನ ಸುತ್ತಿ ಸಾವ ತೆರನಂತೆ ಮನ ಬಂದುದ ಬಯಸ ಬೇವುತ್ತಿದ್ದೇನೆ..." ಇದು ಯಾರ ವಚನ?

A) ಬಸವಣ್ಣ    B) ಅಲ್ಲಮಪ್ರಭು
C) ಅಕ್ಕಮಹಾದೇವಿ    D) ದೇವರದಾಸಿಮಯ್ಯ

66. "......ನಿನ್ನದೀ ಮೇದಿನಿ ಪಟ್ಟಮುಂ ನಿನತೆ ನೀನಿರೆ ಮತ್ತೆ ಪೆಱರ್ ನರೇಂದ್ರರೇ" ಈ ಮಾತನ್ನು ಯಾರು ಯಾರಿಗೆ ಹೇಳಿದರು?

A) ಶ್ರೀಕೃಷ್ಣ–ಕರ್ಣನಿಗೆ    B) ಭೀಷ್ಮ–ಕರ್ಣನಿಗೆ
C) ಕುಂತಿ–ಕರ್ಣನಿಗೆ    D) ದ್ರೋಣ–ದುರ್ಯೋಧನನಿಗೆ

67. 'ಕರ್ನಾಟಕ ಗತವೈಭವ' ಈ ಕೃತಿಯ ಕರ್ತೃ

A) ಆಲೂರು ವೆಂಕಟರಾಯರು    B) ಫ.ಗು.ಹಳಕಟ್ಟಿ
C) ಪಂಜೆ ಮಂಗೇಶರಾವ್    D) ಶ್ರೀನಿವಾಸ ಹಾವನೂರ

68. 'ಟೈರೀಸಿಯಸ್' ಯಾರು?

A) ಯೊಕಾಸ್ತಳ ಸೋದರ    B) ಅರ್ಚಕ
C) ಮೇಳದವ    D) ಅಂಧಭವಿಷ್ಯಕಾರ

69. 'ಅಲ್ಲೆ ಕುಂತವರೆ' ಈ ಕವನ ಸಿದ್ಧಲಿಂಗಯ್ಯನವರ ಯಾವ ಸಂಕಲನದಲ್ಲಿ ಕಂಡುಬರುತ್ತದೆ?

A) ಹೊಲೆಮಾದಿಗರ ಹಾಡು    B) ಸಾವಿರಾರು ನದಿಗಳು
C) ಕಪ್ಪುಕಾಡಿನ ಹಾಡು    D) ಊರು ಕೇರಿ

70. 'ಮತ್ತೆ ಮೊಳಗಲಿ ಇಲ್ಲಿ ಪಾಂಚಜನ್ಯ' ಈ ಕವನದ ಕರ್ತೃ

A) ಸುಮತೀಂದ್ರನಾಡಿಗ    B) ಬಿ.ಸಿ.ರಾಮಚಂದ್ರಶರ್ಮ
C) ಕೆ.ವಿ.ಪುಟ್ಟಪ್ಪ    D) ಗೋಪಾಲಕೃಷ್ಣ ಅಡಿಗ

71. ಇವುಗಳಲ್ಲಿ ಸರಿಯಾದುದನ್ನು ಗುರುತಿಸಿ

A) ಆಧುನಿಕ ರಂಗಭೂಮಿಯ ಜನಕ– ಯೂರಿಪಿಡೀಸ್

B) ಅಗ್ನಿ ಮತ್ತು ಮಳೆ ನಾಟಕದ ಕರ್ತೃ– ಚಂದ್ರಶೇಖರ ಕಂಬಾರ

C) ಅಸಂಗತ ನಾಟಕಗಳ ಪಿತಾಮಹ– ಟಿ.ಪಿ.ಕೈಲಾಸಂ

D) ಅಶ್ವತ್ಥಾಮನ್ ನಾಟಕದ ಮೇಲೆ ಪ್ರಭಾವ ಬೀರಿರುವ ಕೃತಿ– ಟಾರ್ಟೂಫ್

72. "ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು" ಈ ಮಾತು ಬರುವ ಕೃತಿ.

A) ಶ್ರೀರಾಮ ಪಟ್ಟಾಭಿಷೇಕ B) ಶ್ರೀರಾಮಾಶ್ವಮೇಧ

C) ಅದ್ಭುತರಾಮಾಯಣ D) ಶೇಷರಾಮಾಯಣ

73. 'ಚಿತ್ರಾಂಗದ' ಕಾವ್ಯ ಯಾವ ಛಂದಸ್ಸಿನಲ್ಲಿ ರಚಿತವಾಗಿದೆ?

A) ಉತ್ಸಾಹರಗಳೆ B) ಮಂದಾನಿಲರಗಳೆ

C) ಸರಳರಗಳೆ D) ಮಹಾಛಂದಸ್ಸು

74. ಜನಪದ ರಂಗಭೂಮಿಯ ತಂತ್ರಗಾರಿಕೆಯ ಮೇಲೆ ಪ್ರಭಾವ ಬೀರಿರುವ ಪ್ರಸಿದ್ಧ ಪಾಶ್ಚಾತ್ಯ ನಾಟಕಕಾರ

A) ಆಲ್ಬರ್ಟ್ ಕಮು B) ಸ್ಯಾಮ್ಯುಯೆಲ್ ಬ್ರೆಕ್ಟ್

C) ಷೇಕ್ಸ್‌ಪಿಯರ್ D) ಬರ್ನಾಡ್ ಷಾ

75. 'ವಂಶವೃಕ್ಷ' ಕಾದಂಬರಿಯ ಕೇಂದ್ರ ಪಾತ್ರ

A) ಜಗನ್ನಾಥ B) ಗೋಪಾಲಯ್ಯ

C) ಶ್ರೀನಿವಾಸ ಶ್ರೋತ್ರಿ D) ಪ್ರಾಣೇಶಚಾರ್ಯ

76. ಕಾಳಿದಾಸನ ಯಾವ ಕೃತಿ ಹರಿಹರನ 'ಗಿರಿಜಾ ಕಲ್ಯಾಣ'ದ ಮೇಲೆ ಪ್ರಭಾವ ಬೀರಿದೆ?

A) ಕುಮಾರ ಸಂಭವ B) ರಘುವಂಶ

C) ಮೇಘದೂತ D) ಮಾಳವಿಕಾಗ್ನಿಮಿತ್ರ

77. ಆಂಡಯ್ಯನ 'ಕಬ್ಬಿಗರ ಕಾವ' ಯಾವ ಪ್ರಕಾರಕ್ಕೆ ಸೇರಿದ ಕೃತಿಯಾಗಿದೆ?

A) ಸಾಂಗತ್ಯ B) ಚಂಪೂ C) ಷಟ್ಪದಿ D) ರಗಳೆ

78. "ಹರಿದ ಗೋಣಿಯಲೊಬ್ಬ ಕಳವೆಯ ತುಂಬಿ ಇರುಳೆಲ್ಲ ನಡೆದನಾ ಸುಂಕಕ್ಕಂಜಿ..." ಈ ವಚನದ ಕರ್ತೃ?

A) ಚನ್ನಬಸವಣ್ಣ B) ಆಯ್ದಕ್ಕಿ ಮಾರಯ್ಯ

C) ಅಂಬಿಗರ ಚೌಡಯ್ಯ D) ದೇವರ ದಾಸಿಮಯ್ಯ

79. ಅನುಪಮಾ ನಿರಂಜನ ಅವರ ಕಾದಂಬರಿಗಳು ಇವು

a) ಮಾಧವಿ b) ಜೀವನ ಜಾಲ

c) ಗ್ರಾಮಲೀಲೆ d) ಕೊಳಚೆ ಕೊಂಪೆಯ ದಿನಗಳು

ಇವುಗಳಲ್ಲಿ ಸರಿಯಾದ ಉತ್ತರ :

A) aಮತ್ತು b B) a ಮತ್ತು d

C) bಮತ್ತು c D) a ಮತ್ತು c

80. ಕನ್ನಡದ ಪ್ರಥಮ ವೃತ್ತ ಪತ್ರಿಕೆ 'ಮಂಗಳೂರು ಸಮಾಚಾರ' ಆರಂಭವಾದ ವರ್ಷ

A) ೧೮೫೦ B) ೧೮೫೩

C) ೧೮೪೩ D) ೧೮೯೮

81. 'ಚಂದ್ರಹಾಸನ ಕಥೆ' ಬರುವ ಕೃತಿ

A) ಕುಮಾರವ್ಯಾಸ ಭಾರತ B) ಸಾಳ್ವಭಾರತ

C) ಜೈಮಿನಿಭಾರತ D) ತುರಂಗಭಾರತ

82. ಸಾಂಗತ್ಯದ ಮೊದಲ ಕೃತಿ ಇದು

A) ಹದಿಬದೆಯ ಧರ್ಮ B) ಸೊಬಗಿನ ಸೋನೆ

C) ಮೋಹನತರಂಗಿಣಿ D) ಕುಮಾರರಾಮನಕಥೆ

83. 'ಚಪ್ಪಲಿಗಳು' ಇದು ಯಾರ ಕಥಾಸಂಕಲನ

A) ಭಾನುಮುಷ್ತಾಕ್ B) ವೈದೇಹಿ

C) ಸುನಂದಾ ಬೆಳಗಾಂವಕರ್ D) ಸಾರಾ ಅಬೂಬಕರ್

84. ಪಂಪನ ಇತಿವೃತ್ತದ ಮೇಲೆ ಬೆಳಕು ಚೆಲ್ಲುವ ಶಾಸನ

A) ಜಿನವಲ್ಲಭನ ಗಂಗಾಧರಂ ಶಾಸನ

B) ಹಲ್ಮಿಡಿಶಾಸನ

C) ಶ್ರವಣ ಬೆಳಗೊಳ ಶಾಸನ

D) ಜುರಾಶಾಸನ

85. "...ದಿನಪಸುತನಂ ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ದಪೆನೇ" ಈ ಮಾತನ್ನು ಯಾರು ಯಾರಿಗೆ ಹೇಳಿದ್ದಾರೆ?

A) ಕರ್ಣ–ದುರ್ಯೋಧನನಿಗೆ B) ದುರ್ಯೋಧನ–ಕೃಷ್ಣನಿಗೆ

C) ಭೀಮ–ದುರ್ಯೋಧನನಿಗೆ D) ದುರ್ಯೋಧನ–ಭೀಷ್ಮರಿಗೆ

86. 'ಗಂಗಾವತರಣ'ದ ಕರ್ತೃ

A) ಮಧುರಚೆನ್ನ
B) ದ.ರಾ.ಬೇಂದ್ರೆ
C) ಜಿ.ಪಿ.ರಾಜರತ್ನಂ
D) ಕೆ.ಎಸ್.ನರಸಿಂಹಸ್ವಾಮಿ

87. 'ಎದೆಗೆ ಬಿದ್ದ ಅಕ್ಷರ' ಇದು ಯಾರ ಕೃತಿ

A) ಕುಂ.ವೀರಭದ್ರಪ್ಪ
B) ಡಿ.ಆರ್.ನಾಗರಾಜ
C) ದೇವನೂರು ಮಹದೇವ
D) ಬರಗೂರು ರಾಮಚಂದ್ರಪ್ಪ

88. 'ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ...' ಈ ಕೀರ್ತನೆಯ ಕರ್ತೃ

A) ಕನಕದಾಸರು
B) ಪುರಂದರದಾಸರು
C) ಜಗನ್ನಾಥದಾಸರು
D) ವಾದಿರಾಜರು

89. ಇವುಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುವುದಿಲ್ಲ.?

A) ದಾಟು–ಎಸ್.ಎಲ್.ಭೈರಪ್ಪ
B) ಬಂಡಾಯ–ವ್ಯಾಸರಾಯ ಬಲ್ಲಾಳ
C) ವೈಶಾಖ–ಚದುರಂಗ
D) ಅವಧೇಶ್ವರಿ–ಪೂರ್ಣಚಂದ್ರ ತೇಜಸ್ವಿ

90. ಮಹಾಶ್ವೇತೆಯ ಶಾಪದಿಂದ ಗಿಳಿಯಾದವ

A) ಚಂದ್ರಾಪೀಡ
B) ವೈಶಾಂಪಯನ
C) ಪುಂಡರೀಕ
D) ಕಪಿಂಜಲ

91. 'ಶರ್ಮಿಷ್ಠೆ–ದೇವಯಾನಿ ಶುಕ್ರಾಚಾರ್ಯ' ಈ ಪಾತ್ರಗಳು ಬರುವ ನಾಟಕ

A) ಹಯವದನ
B) ಸಿರಿಸಂಪಿಗೆ
C) ಯಯಾತಿ
D) ಋಷ್ಯಶೃಂಗ

92. ಇವು ಪ್ರಾಚೀನ ಕನ್ನಡ ಗದ್ಯ ಗ್ರಂಥಗಳು

a) ಚಾವುಂಡರಾಯಪುರಾಣ ಮತ್ತು ಮುದ್ರಾಮಂಜೂಷ
b) ಸಮಯಪರೀಕ್ಷೆ ಮತ್ತು ಹರಿವಂಶಾಭ್ಯುದಯ
c) ವಡ್ಡಾರಾಧನೆ ಮತ್ತು ರಾಜಾವಳೀ ಕಥೆ
d) ಲೀಲಾವತಿ ಮತ್ತು ಸೋಮನಾಥಚರಿತೆ

ಇವುಗಳಲ್ಲಿ ಸರಿಯಾದ ಉತ್ತರ :

A) a ಮತ್ತು d
B) c ಮತ್ತು b
C) a ಮತ್ತು b
D) a ಮತ್ತು c

93. ರಾಗವಿದ್ದರೆ ಭೋಗ ಭೋಗವಿದ್ದರೆ ರಾಗ
ರಾಗದಲಿ ಸಕಲಸಂಪದವು ಜಗದಲಿ...
...................... ಸರ್ವಜ್ಞ ಬಿಟ್ಟಿರುವ ಜಾಗಕ್ಕೆ ಯಾವ ಮಾತು ಸೂಕ್ತವಾದದ್ದಾಗಿದೆ.

A) ಕರ್ಮವೇ ಕಾರಣ  B) ವಿರಾಗವೇ ಯೋಗ
C) ಭೋಗಭೋಗವೇ  D) ಸಿರಿತನವೇ ಬರಲಿ

94. 'ಅಕ್ರೂರ ಸಂಧಾನ' ಪ್ರಸಂಗ ಬರುವ ಕೃತಿ
A) ಜಗನ್ನಾಥ ವಿಜಯ  B) ಕೆಳದಿನೃಪವಿಜಯ
C) ಚಿಕದೇವರಾಯ ವಿಜಯ  D) ಕಂಠೀರವ ನರಸರಾಜ ವಿಜಯ

95. ವಾರ್ಧಕ ಷಟ್ಪದಿ ಪ್ರಕಾರದಲ್ಲಿ ಕಾವ್ಯವನ್ನು ರಚಿಸಿರುವ ಕವಿಗಳು ಇವರು
A) ನಯಸೇನ, ಚಂದ್ರರಾಜ, ಬ್ರಹ್ಮಶಿವ
B) ಶಿಶುಮಾಯಣ, ಭಾಸ್ಕರ, ನಿಜಗುಣಶಿವಯೋಗಿ
C) ರಾಘವಾಂಕ, ಲಕ್ಷ್ಮೀಶ, ವಿರೂಪಾಕ್ಷ ಪಂಡಿತ
D) ಕುಮಾರವ್ಯಾಸ, ಕನಕದಾಸ, ನಂಜುಂಡ

96. 'ಕನ್ನಡ ಛಂದಸ್ಸಂಪುಟ' ಕೃತಿಯ ಕರ್ತೃ
A) ಕೆ.ಜಿ.ನಾರಾಯಣಪ್ರಸಾದ್  B) ಎಲ್.ಬಸವರಾಜು
C) ಟಿ.ವಿ.ವೆಂಕಟಾಚಲಶಾಸ್ತ್ರೀ  D) ಡಿ.ಎಸ್.ಕರ್ಕಿ

97. ಷಡಕ್ಷರಿಯ ಯಾವ ಕಾವ್ಯಕ್ಕೆ ಬಸವೇಶ್ವರ ಚರಿತೆ ವಸ್ತುವಾಗಿದೆ?
A) ರಾಜಶೇಖರ ವಿಳಾಸ  B) ಶಬರಶಂಕರ ವಿಳಾಸ
C) ವೃಷಭೇಂದ್ರವಿಜಯ  D) ಯಾವೂದು ಅಲ್ಲ

98. "ಬೇವನು ತೇದರೆ ಬಾವನ್ನವಾದೀತೆ
ಬೇವಿನ ಗುಣವು ಹೋದೀತೆ" ಇದು ಯಾವ ಛಂದಸ್ಸಿಗೆ ಉದಾಹರಣೆ?
A) ತ್ರಿಪದಿ  B) ಏಳೆ
C) ಅಕ್ಕರ  D) ಛಂದೋವತಂಸ

99. ಕುಮಾರವ್ಯಾಸ ಭಾರತದಲ್ಲಿ ಹತ್ತು ಪರ್ವಗಳಿವೆ. ಅದರಲ್ಲಿ ಕರ್ಣಪರ್ವ ಎಷ್ಟನೆಯದು?
A) ಆರನೆಯದು  B) ಏಳನೆಯದು
C) ಎಂಟನೆಯದು  D) ಒಂಭತ್ತನೆಯದು

100. 'ಮನೋಮಯ, ಪ್ರಾಣಮಯ, ಅನ್ನಮಯ, ವಿಜ್ಞಾನಮಯ ಮತ್ತು ಆನಂದಮಯ ಈ ಭೂಮಿಕೆಗಳನ್ನು ಪ್ರತಿನಿಧಿಸುವ' ಆಧುನಿಕ ಕನ್ನಡ ಮಹಾಕಾವ್ಯವಿದು.

A) ಶ್ರೀರಾಮಾಯಣ ಮಹಾನ್ವೇಷಣಂ

B) ಶ್ರೀಹರಿಚರಿತೆ

C) ಭಾರತ ಸಿಂಧುರಶ್ಮಿ

D) ಶ್ರೀರಾಮಾಯಣದರ್ಶನಂ

101. ನಾಗಚಂದ್ರ ಕವಿಯ ಆಶ್ರಯದಾತ

A) ಇಮ್ಮಡಿ ತೈಲಪ B) ಚಾಲುಕ್ಯ ಜಯಸಿಂಹ

C) ಗಂಗರಾಚಮಲ್ಲ D) ಹೊಯ್ಸಳ ೧ನೆಯ ಬಲ್ಲಾಳ

102. "ಚಿತ್ರಮಪಾತ್ರೇರಮತೇ ನಾರಿ" ಈ ಉಕ್ತಿ ಬರುವ ಕೃತಿ.

A) ಯಶೋಧರ ಚರಿತೆ

B) ಅಭಿನವದಶಕುಮಾರ ಚರಿತೆ

C) ನಳ ಚರಿತೆ

D) ವೀರೇಶ ಚರಿತೆ

103. '...ಬೊಬ್ಬುಳಿ ತೆರೆಯನು ದಡಕ್ಕೆ ಹೊಮ್ಮಿಸಿ
ಅಬ್ಬರದಲಿ ಬೋರ್ ಬೋರೆನೆ ಗುಮ್ಮಿಸಿ' ಇಲ್ಲಿ 'ದಡಕ್ಕೆ' ಎಂಬುದು ಯಾವ ಗಣ?

A) ರುದ್ರಗಣ B) ವಿಷಮಗಣ

C) ಪದ್ಮಗಣ D) ವಿಷ್ಣುಗಣ

104. ಚಂಪಕಮಾಲಾವೃತ್ತದ ಲಕ್ಷಣ ಇದು

A) ಭರನಭಭರಲಗು B) ಮರಭನಯಯಯ

C) ಮಸಜಸತತಗು D) ನಜಭಜಜಜರ

105. ೨ನೆಯ ನಾಗವರ್ಮನ 'ವರ್ಧಮಾನ ಪುರಾಣ'ವನ್ನು ಮೊತ್ತಮೊದಲಿಗೆ ಸಂಶೋಧಿಸಿ ಸಂಪಾದಿಸಿಕೊಟ್ಟವರು ಯಾರು?

A) ಭುಜಭಲಶಾಸ್ತ್ರೀ B) ಬಿ.ಎಸ್.ಸಣ್ಣಯ್ಯ

C) ಆರ್.ನರಸಿಂಹಾಚಾರ್ D) ಹಂಪ ನಾಗರಾಜಯ್ಯ

106. 'ತಿಳಿಗೊಳದಿಂದೆ ಪಾಱಿದುವು ಹಂಸಕುಳಂ' ಇದನ್ನು ಕೇಶಿರಾಜ ಯಾವ ವಿಭಕ್ತಿ ಪ್ರತ್ಯಯಕ್ಕೆ ಉದಾಹರಣೆಯಾಗಿ ನೀಡಿದ್ದಾನೆ?

A) ಚತುರ್ಥಿ ವಿಭಕ್ತಿ B) ಷಷ್ಠಿ ವಿಭಕ್ತಿ

C) ಪಂಚಮ ವಿಭಕ್ತಿ D) ಸಪ್ತಮಿ ವಿಭಕ್ತಿ

107. ನೋಡುರ್ವೆ ಬೇಡುರ್ವೆ ಇವು

A) ಉತ್ತರಮಾರ್ಗ  B) ದಕ್ಷಿಣಮಾರ್ಗ

C) ಪೂರ್ವಮಾರ್ಗ  D) ಪಶ್ಚಿಮಮಾರ್ಗ

108. 'ಗದಾಯುದ್ಧ' ಕಾವ್ಯದಲ್ಲಿ ಎಷ್ಟು ಆಶ್ವಾಸಗಳಿವೆ?

A) ಒಂಭತ್ತು  B) ಹತ್ತು  C) ಹನ್ನೊಂದು  D) ಹನ್ನೆರಡು

109. ೫.೫
೫.೫
೫.೫.೫ ಈ ಬಗೆಯ ಗಣವಿನ್ಯಾಸ ಯಾವಷಟ್ಪದಿಯಲ್ಲಿ ಕಂಡುಬರುತ್ತದೆ.

A) ಭೋಗಷಟ್ಪದಿ  B) ಶರಷಟ್ಪದಿ

C) ವಾರ್ಧಕಷಟ್ಪದಿ  D) ಕುಸುಮಷಟ್ಪದಿ

110. 'ಮಿಗಿಲಿವರ್ಗಳಿನೀ ಭಾರತಂ ಲೋಕಪೂಜ್ಯಂ' ಈ ಮಾತು ಬರುವ ಕೃತಿ.

A) ಕರ್ಣಾಟ ಭಾರತ ಕಥಾಮಂಜರಿ

B) ವಿಕ್ರಮಾರ್ಜುನವಿಜಯಂ

C) ಸಾಹಸಭೀಮವಿಜಯಂ

D) ಭುವನೈಕ ರಾಮಾಭ್ಯುದಯ

111. ಅನುಕ್ರಮದ ಮಾದರಿ : ಕಾಲಾನುಕ್ರಮದ ರೀತ್ಯಾ ಸಮರ್ಪಕವಾದ್ದನ್ನು ಗುರುತಿಸಿ.

A) ಸಿದ್ಧರಾಮಪುರಾಣ, ಬಸವಪುರಾಣ, ಪ್ರಭುಲಿಂಗಲೀಲೆ, ಗೀತಗೋಪಾಲ

B) ಬಸವಪುರಾಣ, ಸಿದ್ಧರಾಮಪುರಾಣ, ಗೀತಗೋಪಾಲ, ಪ್ರಭುಲಿಂಗಲೀಲೆ

C) ಪ್ರಭುಲಿಂಗಲೀಲೆ, ಗೀತಗೋಪಾಲ, ಬಸವಪುರಾಣ, ಸಿದ್ಧರಾಮಪುರಾಣ

D) ಗೀತಗೋಪಾಲ, ಪ್ರಭುಲಿಂಗಲೀಲೆ, ಸಿದ್ಧರಾಮಪುರಾಣ, ಬಸವಪುರಾಣ

112. ಅನುಕ್ರಮದ ಮಾದರಿ : ಕಾಲಾನುಕ್ರಮದ ರೀತ್ಯಾ ಸಮರ್ಪಕವಾದ್ದನ್ನು ಗುರುತಿಸಿ.

A) ಯು.ಆರ್.ಅನಂತಮೂರ್ತಿ, ವಿ.ಕೃ.ಗೋಕಾಕ್, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ

B) ವಿ.ಕೃ.ಗೋಕಾಕ್, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ, ಯು.ಆರ್.ಅನಂತಮೂರ್ತಿ

C) ವಿ.ಕೃ.ಗೋಕಾಕ್, ಯು.ಆರ್.ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ

D) ವಿ.ಕೃ.ಗೋಕಾಕ್, ಚಂದ್ರಶೇಖರ ಕಂಬಾರ, ಯು.ಆರ್.ಅನಂತಮೂರ್ತಿ, ಗಿರೀಶ್ ಕಾರ್ನಾಡ್

113. ಇವುಗಳಲ್ಲಿ ಸರಿಯಾದುದನ್ನು ಗುರುತಿಸಿ.

A) ದ್ರವಿಡಿಯನ್ ಲಿಂಗ್ವಿಸ್ಟಿಕ್ ಅಸೋಸಿಯೇಷನ್ ಆಫ್ ಇಂಡಿಯಾ– ದೆಹಲಿ

B) ಸರದಾರ್ ಪಟೇಲ್ ಇನ್‌ಸ್ಟಿಟ್ಯೂಟ್ ಆಫ್ ಎಕಾನಾಮಿಕ್ಸ್ ಅಂಡ್ ಸೋಸಿಯಲ್ ರಿಸರ್ಚ್– ನಾಗಪುರ

C) ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್– ಕುಪ್ಪಂ

D) ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್– ಬೆಂಗಳೂರು

114. "ಕರ್ಣಾಟಕ ವಿಷಯ ಜಾತಿ ಛಂದಸ್ಸಿನ ಮಟ್ಟುಗಳ ಉಲ್ಲೇಖ ನಾಗವರ್ಮನ ಛಂದೋಬುಧಿಯಲ್ಲಿ ಮೊದಲು ಕಂಡುಬರುತ್ತದೆ? ಅಲ್ಲಿ ಸಾಂಗತ್ಯದ ಲಕ್ಷಣವನ್ನು ನಾಗವರ್ಮ ಹೇಳಿದ್ದಾನೆ" ಈ ಹೇಳಿಕೆ

A) ಸರಿಸರಿ B) ಸರಿತಪ್ಪು C) ತಪ್ಪುಸರಿ D) ತಪ್ಪುತಪ್ಪು

115. ಬಾದಾಮಿ ಶಾಸನದಲ್ಲಿ ಎಷ್ಟು ತ್ರಿಪದಿಗಳಿವೆ

A) ಎರಡು B) ಮೂರು C) ನಾಲ್ಕು D) ಐದು

116. 'ಕೆರೆಗೆ ಹಾರ' ಈ ಜಾನಪದ ಗೀತೆಯನ್ನು ಮೊದಲಿಗೆ ಬೆಳಕಿಗೆ ತಂದ ಕೀರ್ತಿ ಇವರಿಗೆ ಸಲ್ಲುತ್ತದೆ.

A) ಬೆಟಗೇರಿ ಕೃಷ್ಣಶರ್ಮ B) ಆರ್.ಎಸ್.ಪಂಚಮುಖಿ

C) ಬಿ.ಎಸ್.ಗದ್ದಿಗಿಮಠ D) ಎಸ್.ಕೆ.ಕರೀಂಖಾನ್

117. ಮಾತ್ರಗಣ ಛಂದಸ್ಸು ಯಾವುದು?

A) ಚೌಪದಿ B) ಅಕ್ಕರ C) ಮಲ್ಲಿಕಾಮಾಲೆ D) ರಗಳೆ

118. "ತಾಳಕ್ಕೆ ಹೊರತಾಗಿ ನಿಂತು ತಾಳವನ್ನು ಎತ್ತಿಕೊಡಲು ಸಹಕಾರಿಯಾಗುವ ಪಾದಾದಿಯ ಲಘ್ವಕ್ಷರಕ್ಕೆ" ಏನೆಂದು ಹೇಳುತ್ತೇವೆ?

A) ಮುಡಿ B) ಪದ್ಮಗಣ C) ಅನಾಗತ D) ಕಂಪಿತ

119. 'ಕನ್ನಡ ಸಂಶೋಧನಾ ಶಾಸ್ತ್ರ' ಇದು ಯಾರ ಕೃತಿ?

A) ಎಂ.ಎಂ.ಕಲ್ಬುರ್ಗಿ B) ಎಂ.ಚಿದಾನಂದಮೂರ್ತಿ

C) ಬಿ.ವ್ಹಿ.ಶಿರೂರ D) ತಾಳ್ತಜೆ ವಸಂತಕುಮಾರ್

120. ಈ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ?

A) ಶಿವರಾಮಕಾರಂತ– ನಟಸಾರ್ವಭೌಮ

B) ಅ.ನ.ಕೃ– ಧರ್ಮರಾಯನ ಸಂಸಾರ

C) ಯಶವಂತ ಚಿತ್ತಾಲ– ಮುಕ್ತಿ

D) ಶ್ರೀನಿವಾಸ ವೈದ್ಯ– ಹಳ್ಳ ಬಂತು ಹಳ್ಳ

---